Stray incidents at Gulbarga

ಶ್ರೀ ಬಾಪೂಗೌಡ ರಾಯಪ್ಪ (ಶಹಪುರ್).—ಸ್ಪೀಕರ್, ಗುಲ್ಬರ್ಗಾದಲ್ಲಿ ಹಿಂದೆ ಗಲಭೆಗಳಾದಾಗ ಅಲ್ಲಿಗೆ ಮಾನ್ಯ ಚೀಫ್ ಮಿನಿಸ್ಟರ್ ಪೋರ್ಟ್ ಮಿನಿಸ್ಟರವರು ಹೋಗಿದ್ದ ಕಾಲದಲ್ಲಿ ಪೋಲಿಸರ ವರ್ತನೆ ಬಗ್ಗೆ ಕೂಡ ಹೇಳಿಬಂದಿದ್ದಾರೆ. ಇದರ ವಿವರಗಳನ್ನು ಈಗ ಹೇಳಲು ಹೋಗುತ್ತಿಲ್ಲ. ಆದರೆ ನಿನ್ನೆ ದಿವಸ ಪತ್ರಿಕೆಗಳಲ್ಲ ಬಂದಿರುವಂತೆ ನೋಡಿದರೆ ಅಲ್ಲಿನ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸೂಚನೆ ಗಳಿವೆ ಎಂದು ಕಾಣುತ್ತೆ. ಆದರಂತೆ ನಿನ್ನೆ ದಿನ ಒಬ್ಬರು ಪೋಟೋಗ್ರಾಫರನ್ನು ಸ್ಟ್ಯಾಬ್ ಮಾಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಇಂತಹ ಘಟನೆಗಳು ನಡೆದು ಇನ್ನೂ ಹೆಚ್ಚು ವಿಕೋಪಕ್ಕೆ ಹೋದೀತು ಎನ್ನುವುದಕ್ಕಾಗಿ ಮುಂಜಾಗರೂಕತೆಯ ಕ್ರಮಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ಸರಕಾರದ ಗಮನ ಸೆಳೆಯುತ್ತಿದ್ದೇನೆ.

Sri H. M. CHANNABASAPPA (Minister for Public Works).—I am glad that the hon. member has passed on this information. Needful action will be taken to prevent any further deterioration in the law and order situation.

ಶ್ರೀ ವಿ. ಎನ್. ಪಾಟೀರ್ (ಹುಮ್ನಾಬಾದ್).—ಎರಡು ತಿಂಗಳ ಹಿಂದೆ ಇದೇ ಗುಲ್ಬರ್ಗಾ ನಗರದಲ್ಲಿ ಗಲಭೆಗಳು ಆಗಿದ್ದರೂ ಸರಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಇದರ ಮೂಲ ಭೂತ ಕಾರಣಗಳು ಯಾವುದು ಇದರಲ್ಲಿ ತಪ್ಪು ಮಾಡಿದವರು ಯಾರು ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ತಕ್ಕ ಪ್ರಯತ್ನ ಮಾಡಲಿಲ್ಲ. ಇಲ್ಲಿರುವ ಮೆಡಿಕಲ್ ಕಾಲೇಜಿನಲ್ಲಿ ಎರಡು ಗುಂಪುಗಳಿವೆ. ಒಂದು ಗುಂಪು ಜನಸಂಘದವರ ಕಡೆ ಇದೆ. ಇನ್ನೊಂದು ಇಸ್ಲಾಮಿಯಾ ಗುಂಪಿಗೆ ಸೇರಿದ್ದು. ಇವೆರಡು ಪಕ್ಷಗಳ ಲೀಡರುಗಳೂ ಇದ್ದಾರೆ. ಇಲ್ಲಿರುವ ವಿದ್ಯಾರ್ಥಿಗಳಲ್ಲ ಒಂದು ರೀತಿಯ ವೈಷಮ್ಯಗಳು ಬಂದು ಗಲಭೆಗಳು ಆಗುತ್ತಲೇ ಇವೆ. ಇದರಲ್ಲಿ ಕೆಲವು ಜನ ಜನಸಂಘದವರು ಇಲ್ಲವೇ ಸಿಂಡಿಕೇಟಿನವರು ಹಾಗೂ ಇನ್ನಿತರ ಪಕ್ಷಗಳವರು ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡಿ ಇಂತಹ ಗಲಭೆಗಳಿಗೆ ಅವಕಾಶವಾಗಿದೆ. ಸರ್ಕಾರ ಇಲ್ಲಿರುವ ಮುಖಂಡರುಗಳನ್ನು ಕರೆಸಿ ಇದುವರೆಗೆ ಯಾರು ಇದಕ್ಕೆ ಕಾರಣರು ಎನ್ನುವುದನ್ನೇನಾದರೂ ಪತ್ತೆ ಮಾಡಿದರೇ ? ಇದಕ್ಕೆ ಇಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಹೇಳಿದರೆ ಅದು ಸಾಧ್ಯವಿಲ್ಲ ಎಂದರು. ಇಂತಹ ಎನ್‌ಕ್ವೈರಿ ಮಾಡಿದ್ದರೆ ಇದರಲ್ಲಿ ಸತ್ಯಾಂಶಗಳು ಬೆಳಕಿಗೆ ಬರುತ್ತಿತ್ತು. ದಿನಬೆಳಗಾದರೆ ಗುಲ್ಬರ್ಗಾದಲ್ಲಿ ಗಲಭೆಗಳು ಹಾಗೂ ಚೂರಿ ಇರಿತಗಳು ಸಾಮಾನ್ಯವಾಗಿ ಆಗುತ್ತವೆ ಎಂದು ಅಲ್ಲಿ ಕೇರಿ ಕೇರಿಗಳಲ್ಲೂ ಹೇಳುತ್ತಿದ್ದಾರೆ, ಇದರ ಬಗ್ಗೆ ಈಗಲಾದರೂ ಸರ್ಕಾರ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

12-30 P. M.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಸದಸ್ಯರು ಕೆಲವು ರಾಜಕೀಯ ಪಕ್ಷಗಳನ್ನು ಪ್ರಸ್ತಾಪ ಮಾಡಿದರು. ಅದು ಅನಾವಶ್ಯಕ. ಇಂತಹ ಘಟನೆಗಳು ನಡೆಯುವುದಕ್ಕೆ ಜನರನ್ನು ಪ್ರಚೋದನೆ ಮಾಡುವುದರಲ್ಲಿ ಇಂಡಿಕೇಟ್, ಸಿಂಡಿಕೇಟ್, ಸಿ. ಪಿ. ಐ., ಸಿ. ಪಿ. ಎಂ., ಜನಸಂಘ, ಮುಂತಾದ ಎಲ್ಲ ಪಕ್ಷಗಳು ಸೇರಿರುತ್ತವೆ. ಆದರೆ ಇಂತಹ ಘಟನೆ ನಡೆಯುವುದಕ್ಕೆ ಪ್ರಚೋದನೆ ಮಾಡುವಂತಹ ಜನ ಏನಿದ್ದಾರೆ, ಅವರು ಯಾವುದೇ ಪಕ್ಷಕ್ಕೆ ಸೇರಿರಲಿ, ಅಂತಹವರನ್ನು ಪಕ್ಷ, ಪಂಗಡ ಅಥವಾ ವರ್ಗ ನೋಡದೆ ದಮನ ಮಾಡಬೇಕು ಮತ್ತು ಅಂತಹವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಪ್ರಾರ್ಥನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಪಕ್ಷ ಪರಪಕ್ಷಗಳ ವಿಷಯವಲ್ಲ. ಇದು ಜನತೆಗೆ ರಕ್ಷಣೆ ಕೊಡತಕ್ಕಂಥ ವಿಷಯ. ಮತ್ತು ಕಾನೂನುಬದ್ಧವಾಗಿ ನ್ಯಾಯಹರಿಸಿಕೊಂಡು ಹೋಗಲು ಸೂಕ್ತ ವ್ಯವಸ್ಥೆ ಮಾಡತಕ್ಕಂಥ ವಿಷಯ. ಮಾನ್ಯ ಸದಸ್ಯರು ಈ ಬಗ್ಗೆ ಏನೇನು ವಿಷಯಗಳನ್ನು ಹೇಳಿದ್ದಾರೆ, ಅದನ್ನು ಸರ್ಕಾರ ಗಮನದಲ್ಲಟ್ಟುಕೊಂಡು ಜನರಿಗೆ ಮತ್ತು ಅವರ ಆಸ್ತಿಪಾಸ್ತಿಗಳಿಗೆ ಸಂರಕ್ಷಣೆ ಕೊಡತಕ್ಕಂಥ ಕರ್ತವ್ಯವನ್ನು ನಿಷ್ಪಕ್ಷಪಾತದಿಂದ ನಿರ್ವಹಿಸುತ್ತದೆಂದು ತಮಗೆ ಭರವಸೆ ಕೊಡುತ್ತೇನೆ.